


ಮೈಸೂರಿನಲ್ಲಿ ಎಸಿಸಿ ಕಾಂಕ್ರೀಟ್ ಪ್ಲಸ್ ಸಿಮೆಂಟ್‌ನ್ನು ಆಗ್ನೇಯ ವಲಯ ಮಾರಾಟ ನಿರ್ದೇಶಕ ಪಿ.ಎನ್.ಅಯ್ಯರ್ ಶುಕ್ರವಾರ ಬಿಡುಗಡೆ ಮಾಡಿದರು. ದಕ್ಷಿಣ ವಲಯದ ಪ್ರಾದೇಶಿಕ ಮಾರಾಟ ವಿಭಾಗದ ಮುಖ್ಯಸ್ಥ ಸಿ.ಆರ್. ಬೈಂದೂರ್, ಪ್ರಾದೇಶಿಕ ಗ್ರಾಹಕ ಸೇವೆಗಳ ಮುಖ್ಯಸ್ಥ ರಮೇಶ್ ಪಾಠಕ್ ಇದ್ದಾರೆ.

# ಎಸಿಸಿ ಕಾಂಕ್ರೀಟ್ ಪ್ಲಸ್ ಬಿಡುಗಡೆ

ಮೈಸೂರು: ನಗರದಲ್ಲಿ ಎಸಿಸಿ ಕಾಂಕ್ರೀಟ್ ಪ್ಲಸ್ ಉತ್ಪನ್ನವನ್ನು ಎಸಿಸಿ ಲಿಮಿಟೆಡ್‌ನ ಆಗ್ನೇಯ ವಲಯ ಮಾರಾಟ ನಿರ್ದೇಶಕ ಪಿ.ಎನ್.ಅಯ್ಯರ್ ಶುಕ್ರವಾರ ಖಾಸಗಿ ಹೋಟೆಲ್‌ನಲ್ಲಿ ಬಿಡುಗಡೆ ಮಾಡಿದರು.

ನಂತರ ಮಾತನಾಡಿದ ಅವರು 'ಇದೊಂದು ಉತ್ಕೃಷ್ಟ ಪರಿಸರ ಸ್ನೇಹಿ ಸಿಮೆಂಟ್ ಬ್ರಾಂಡ್ ಆಗಿದೆ. ಅತ್ಯಾಧುನಿಕ ತಂತ್ರಜ್ಞಾನದಿಂದ ತಯಾರಾಗಿರುವ ಕಾಂಕ್ರೀಟ್ ಪ್ಲಸ್ ಸಿಮೆಂಟ್ ಹೆಚ್ಚಿನ ಶಕ್ತಿ ಮತ್ತು ಬಾಳಿಕೆ ಗುಣವನ್ನು ಹೊಂದಿದೆ. ಈ ಸಿಮೆಂಟ್ ಆರ್‌ಸಿಸಿ ಕೆಲಸಕ್ಕೆ ಅತ್ಯಂತ ಸೂಕ್ತವಾದದ್ದು. ಕಾಂಕ್ರೀಟ್ ಪ್ಲಸ್ ಸಿಮೆಂಟ್ ಅನ್ನು ವಿಶೇಷ ವಿನ್ಯಾಸವುಳ್ಳ 50 ಕೆ.ಜಿ. ಚೀಲದಲ್ಲಿ ಕೊಡಲಾಗುತ್ತದೆ. ಈ ಚೀಲದಿಂದ ಸಿಮೆಂಟ್ ಸೋರಿಕೆಯಾಗುವುದನ್ನು ಸಂಪೂರ್ಣವಾಗಿ ತಪ್ಪಿಸಲಾಗಿದೆ' ಎಂದು ತಿಳಿಸಿದರು.

'ಕಾಂಕ್ರೀಟ್ ಪ್ಲಸ್ ಸಿಮೆಂಟ್‌ನ್ನು ಹೆಚ್ಚಿನ ಬಾಳಿಕೆ ಬರುವಂತೆ, ಮತ್ತು ಹವಾಮಾನದ ವೈಪರಿತ್ಯಗಳನ್ನು ಉತ್ತಮವಾಗಿ ತಡೆದುಕೊಳ್ಳುವಂತೆ ವಿನ್ಯಾಸ ಮಾಡಲಾಗಿದೆ. ಕಾಂಕ್ರೀಟ್ ಪ್ಲಸ್ ಸಿಮೆಂಟ್ ಜೊತೆ ಗೃಹ ನಿರ್ಮಾಣದ ಅಂದಾಜು, ಉತ್ತಮ ನಿರ್ಮಾಣದ ವಿಧಾನಗಳು, ಸ್ಥಳದಲ್ಲೇ ಬಳಸುವ ವಸ್ತುಗಳ ಪರೀಕ್ಷೆ, ನಿರ್ಮಾಣದ ವಿವಿಧ ಹಂತಗಳಲ್ಲಿ ಪರಿಶೀಲನೆ, ಕಾಂಕ್ರೀಟ್‌ನ ಮಿಶ್ರಣ ಪ್ರಮಾಣ ಮತ್ತು ಕಾಂಕ್ರೀಟ್‌ನ ನಿರ್ಮಾಣದ ಸಾಮರ್ಥ್ಯ ಪರೀಕ್ಷೆ, ಉತ್ಪನ್ನಗಳ ಪ್ರಯೋಜನಗಳು ಮತ್ತು ನಿರ್ಮಾಣ ಪದ್ಧತಿಗಳನ್ನು ವಿವರಿಸುವ ವಿಶೇಷ ಸಾಹಿತ್ಯವನ್ನು ಗ್ರಾಹಕರಿಗೆ ತಲುಪಿಸಲಾಗುವುದು' ಎಂದು ಹೇಳಿದರು.

ಈ ಸಂದರ್ಭದಲ್ಲಿ ಎಸಿಸಿ ದಕ್ಷಿಣ ವಲಯದ ಪ್ರಾದೇಶಿಕ ಮಾರಾಟ ವಿಭಾಗದ ಮುಖ್ಯಸ್ಥ ಸಿ.ಆರ್.ಬೈಂದೂರ್ ಹಾಗೂ ಪ್ರಾದೇಶಿಕ ಗ್ರಾಹಕ ಸೇವೆಗಳ ಮುಖ್ಯಸ್ಥ ರಮೇಶ್ ಪಾಠಕ್ ಇದ್ದರು.